

'ಪುಟ್ಟನೇ ನನ್ನನ್ನು ಹೊಡೆದಿದ್ದು' ಎಂದಳು.

'ಹೌದೇನೋ, ಹೊಡೆದೆಯಾ?' ಎಂದು ಕೇಳಿದೆ.

'ಹೌದು' ಎಂದ ಪುಟ್ಟ. ಅವನದು ಒಂಥರ ಧೈರ್ಯ. ತಪ್ಪು ಮಾಡಿದರೆ ಒಪ್ಪಿಕೊಳ್ಳುತ್ತಾನೆ. ಆ ರೀತಿ ಒಪ್ಪಿಕೊಂಡಿದ್ದಕ್ಕೆ ಅವನ ಮೇಲಿನ ನನ್ನ ಸಿಟ್ಟು ಕರಗಿ ಹೋಯಿತು. ಆದರೂ ಅವನನ್ನು ದಂಡಿಸಬೇಕೆಂದು 'ಯಾಕೆ ಹೊಡೆದೆ. ಹಾಗೆಲ್ಲಾ ಹೊಡೀಬಾರದು' ಎಂದೆ.

'ಈ 'ಅಮ್ಮ' ಅವರಮ್ಮ ಅಂತೆ. ನಮ್ಮಮ್ಮ ಅಲ್ಲವಂತೆ' ಎಂದ ಪುಟ್ಟ. ಚೂರಾಗಿದ್ದ ಪುಸ್ತಕದ ಕಾಗದದ ತುಣುಕಿನಲ್ಲಿದ್ದ ಅಮ್ಮನ ಚಿತ್ರವನ್ನು ತೋರಿಸುತ್ತಾ.

ನನಗೆ ನಗು ಬಂತು.

'ಆಕೆ ಇಬ್ಬರ ಅಮ್ಮ ಕಣ್ರೋ' ಎಂದೆ ನಾನು.

'ಅಲ್ಲ ಅಲ್ಲ ಆಕೆ ನಮ್ಮಮ್ಮ' ಎಂದಳು ಪಿಂಕಿ.

ಆ ಹುಡುಗಿಯ ಧೈರ್ಯಕ್ಕೆ ಖುಷಿಯಾಯಿತು.